

# ಒಡಲೊಳಗಿನ ಬೆಂಕಿ

ಸೂಕ್ಷ್ಮ ವಿವರಗಳ ಮೂಲಕ ಮನುಷ್ಯ–ಸಂಬಂಧಗಳ ಸಂಕೀರ್ಣ ಆಯಾಮಗಳನ್ನು ತೆರೆದಿಡುವ ಕಿರುಚಿತ್ರವಿದು.

■ ಗೌರಿ

ಕುಟುಂಬ ಎಂಬ ವ್ಯವಸ್ಥೆ ಮತ್ತು ಅದರೊಳಗಿನ ಸಂಬಂಧಗಳ ಸಂಕೀರ್ಣತೆಯನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲಾಗದು. ಅದೊಂದು ಬಗೆಯಲ್ಲಿ 'ಹೋಗುತ್ತ ಕೊಯ್ಯುವ ಬರುತ್ತಲೂ ಕೊಯ್ಯುವ ಗರಗಸ'. ವಿಚಿತ್ರವೆಂದರೆ ಈ ಕೊಯ್ಯುವಿಕೆಯೇ ಕುಟುಂಬವೆಂಬ ಹಂದರದ ಕೂಡುವಿಕೆಗೂ ಕಾರಣವಾಗಬಲ್ಲದು. ಇಡೀ ಕುಟುಂಬವನ್ನು ತನ್ನ ಮಮತೆಯ ಸೆರಗಿನಲ್ಲಿಯೇ ತಂಪಾಗಿಡುವ ತಾಯಿ ಒಂದು ತುದಿಯಾದರೆ, ಯಜಮಾನ್ಯದ ಗಟ್ಟಿ ಬೇಲಿಯಾಗಿ ನಿಲ್ಲುವವ ತಂದೆ. ತಂದೆಯದು ವಿಚಿತ್ರ ಕಾಠಿಣ್ಯ. ಅದರಲ್ಲಿಯೂ ತಂದೆ–ಮಕ್ಕಳ ಸಂಬಂಧವಂತೂ ಇನ್ನೂ ಜಟಿಲ. ಈ ಜಟಿಲ ಸಂಬಂಧವನ್ನು, ನಿರ್ಣಯದ ದಡಮುಟ್ಟುವ ಧಾವಂತವಿಲ್ಲದೆ ಕಾಣಿಸುವ ಕಿರುಚಿತ್ರ 'ಲೈಟ್ ಮೈ ಫೈರ್'.

ಕೇವಲ 9 ನಿಮಿಷ ಅವಧಿಯ ಈ ಕಿರುಚಿತ್ರ ನಮ್ಮ ಮನಸಲ್ಲಿ 9 ನಿಮಿಷಗಳ ನಂತರವೂ ಮುಂದುವರಿಯುತ್ತಲೇ ಇರುತ್ತದೆ. ಆ ಅನುರಣನಶಕ್ತಿಯೇ ಈ ಕಿರುಚಿತ್ರದ ಹೆಚ್ಚುಗಾರಿಕೆ.

ಕೋಪಗೊಂಡ ತಂದೆಯೊಬ್ಬ ತನ್ನ ಮಗಳಿಗೆ ಬಾಯ್‌ಫ್ರೆಂಡ್ ಇರುವ ವಿಷಯ ತಿಳಿದು ಕೋಪೋದ್ರಿಕ್ತನಾಗಿ ಅವನ ಮನೆಗೆ ಹೋಗುವುದು ಈ ಕಿರುಚಿತ್ರದ ಎಳೆ. ಪಟಾಕಿಗಳು ಆಕಾಶಕ್ಕೆ ಚಿಮ್ಮಿ ಸಿಡಿಯುತ್ತಿರುವ ಹಿನ್ನೆಲೆಯಲ್ಲಿ, ಆ ಪಟಾಕಿಯ ಬೆಂಕಿಯನ್ನೇ ಮನಸಲ್ಲಿ ತುಂಬಿಕೊಂಡಿರುವಂತೆ ತೋರುವ ಐವತ್ತರ ಆಸುಪಾಸಿನ ಮನುಷ್ಯ, ನಿಯಂತ್ರಿಸಿಕೊಳ್ಳಲಾಗದ ಕೋಪಾವೇಶದಿಂದ ಕಾರು ತೆಗೆದುಕೊಂಡು ಹೋಗುವುದರೊಂದಿಗೆ ಕಿರುಚಿತ್ರ ಆರಂಭವಾಗುತ್ತದೆ.

ಪಾತ್ರದ ಹಿನ್ನೆಲೆ, ಸನ್ನಿವೇಶದ ಪ್ರೇರಣೆ ಯಾವುದನ್ನೂ ನಿರ್ದೇಶಕರು ನೇರವಾಗಿ ಹೇಳುವುದಿಲ್ಲ. ಆದರೆ ಬಹುಸೂಕ್ಷ್ಮ ವಿವರಗಳ ಮೂಲಕವೇ ಎಲ್ಲವನ್ನೂ ಕಟ್ಟಿಕೊಡುತ್ತಾರೆ. ಪಾತ್ರಗಳು ಹಾಕಿಕೊಳ್ಳುವ ಬಟ್ಟೆ, ಅವರು ಇರುವ ಮನೆ, ಓಡಿಸುವ ಕಾರು, ಪ್ರಯಾಣಿಸುವಾಗ ಹಾಕಿಕೊಳ್ಳುವ ಹಾಡು, ಅವರ ನಡವಳಿಕೆ ಎಲ್ಲವೂ ಪರೋಕ್ಷವಾಗಿ ಆ ಪಾತ್ರದ ಸ್ಥಿತಿ, ಸನ್ನಿವೇಶ, ಸಾಮಾಜಿಕ ವ್ಯವಸ್ಥೆಯಲ್ಲಿ ಯಾವ ವರ್ಗದಲ್ಲಿ ಇದ್ದಾರೆ ಎನ್ನುವುದನ್ನೆಲ್ಲ ಕಟ್ಟಿಕೊಡುತ್ತ ಹೋಗುತ್ತದೆ.



ಹೆಸರು: ಲೈಟ್ ಮೈ ಫೈರ್ (ಇಂಗ್ಲಿಷ್)
ನಿರ್ದೇಶನ, ಸಂಕಲನ, ಧ್ವನಿ ವಿನ್ಯಾಸ: ಬಾಬ್ ಬಾರಿಟೊ
ನಿರ್ಮಾಣ: ಜೋ ದೇಪಾಸ್‌ಕ್ವ್ಯುಯೆಲ್
ಛಾಯಾಗ್ರಹಣ: ಕಾನರ್ ಮರ್ಫಿ
ತಾರಾಗಣ: ಎಡ್ ಮೊರಾನ್, ಕೋಲಿನ್ ವಾಕರ್, ರೋಸಿ ಬ್ಯಾಂಟೋನ್, ಡಾಂಟೆ ಪಾಲ್ಮಿಂಟರ್, ಲಿಝಿ

ಆವೇಶದಿಂದ ವೇಗವಾಗಿ ಕಾರು ಓಡಿಸಿಕೊಂಡು ಹೋಗುವ ವ್ಯಕ್ತಿ, ಮಗಳ ಗೆಳೆಯನ ಮನೆ ಎದುರು ಹೋಗಿ ನಿಲ್ಲುತ್ತಾನೆ. ಆ ದೊಡ್ಡ ಮನೆಯನ್ನು ಕಂಡಾಗಲೇ ಅವನ ಆವೇಶ ಅರ್ಧ ಇಳಿದುಬಿಡುತ್ತದೆ. ಮನೆಯಿಂದ ಹೊರಡುವಾಗ ಇದ್ದ ನಡಿಗೆಯಲ್ಲಿನ ಉದ್ರಿಕ್ತತೆಯೂ ಕಡಿಮೆಯಾಗಿ ಮೆಲ್ಲನೆ ಹೆಜ್ಜೆ ಹಾಕುತ್ತ ನಡೆಯುತ್ತಾನೆ. ಮನೆ ಪಕ್ಕ ಸ್ವಿಮ್ಮಿಂಗ್ ಪೂಲ್‌ನಲ್ಲಿ ನೀರಾಟ ಆಡುತ್ತಿರುವ ಹುಡುಗರು ಕಾಣಿಸುತ್ತಾರೆ. ಅವರನ್ನು ದಿಟ್ಟಿಸುತ್ತಿರುವಾಗ ಮನೆಯ ಯಜಮಾನ ಅವನೆದುರು ಬರುತ್ತಾರೆ. ಅವನ ಹಿಂದೆ ಅವನ ಹೆಂಡತಿ, ಜೊತೆಗೊಂದು ಭಯಂಕರ ನಾಯಿ... ನಾಯಿಯ ಗರ್ಜನೆ ಕೇಳಿದ್ದೇ ಹುಡುಗಿಯ ತಂದೆಯ ಆವೇಶವೆಲ್ಲ ಇಳಿದುಹೋಗುತ್ತದೆ.

ಇಲ್ಲಿಯೂ ಅಷ್ಟೆ, ನಿರ್ದೇಶಕರು ಆ ಇಬ್ಬರು ಹುಡುಗರ ನಡುವಿನ ಸಂಬಂಧ ಏನು ಎಂಬುದನ್ನು ಪೂರ್ತಿಯಾಗಿ ಬಿಟ್ಟುಕೊಡುವುದಿಲ್ಲ. ಹುಡುಗಿಯ ತಂದೆ ಹೇಳುವ ಮಾತು, 'ನಿಮ್ಮ ಮಗ ನನ್ನ ಮಗಳಿಗೆ ಏನು ಮಾಡಿದ್ದಾನೆ ಎಂಬುದರ ಸುಳಿವಿದೆಯಾ ನಿಮಗೆ?'. ಹುಡುಗನ ತಂದೆ, ಮಗನನ್ನು ಕರೆದು ಅವನ ಮುಂದೆ ನಿಲ್ಲಿಸಿ ಹೊಡೆಯುವಂತೆ ಹೇಳುತ್ತಾನೆ. ತಂದೆಯೇ ಮಗನಿಗೆ 'ಹೊಡಿ' ಎಂದು ಹೇಳಿದಾಗ ಹೊಡೆಯಲಿಕ್ಕೆ ಎಂದೇ ಬಂದಿದ್ದ ವ್ಯಕ್ತಿ ಪೂರ್ತಿ ಕಂಗಾಲಾಗಿಬಿಡುತ್ತಾನೆ.

ಸಾಮಾನ್ಯವಾಗಿ ಕಾಣುವ ಒಂದು ಘಟನೆಯ ಮೂಲಕವೇ ನಿರ್ದೇಶಕರು ಸಮಾಜದಲ್ಲಿನ ಎರಡು ವರ್ಗಗಳು, ಅವುಗಳ ನಡುವಿನ ವ್ಯತ್ಯಾಸ, ಸಾಮಾಜಿಕ ಸ್ಥಾನಮಾನದ ಹಿನ್ನೆಲೆಯಲ್ಲಿ ಬದಲಾಗುವ ಸಂಬಂಧಗಳ ವ್ಯಾಖ್ಯಾನ, ಪೀಳಿಗೆಗಳ ನಡುವಿನ ಕಂದರ ಎಲ್ಲವನ್ನೂ ಪರೋಕ್ಷ ದಾರಿಯ ಮೂಲಕವೇ ದಾಟಿಸುತ್ತಾ ಹೋಗುತ್ತಾರೆ.

ಸಿನಿಮಾದ ಮೂಲಕ ನಿರ್ದಿಷ್ಟವಾದ ಸಂದೇಶ ನೀಡುವುದು ಅವರ ಉದ್ದೇಶ ಅಲ್ಲ. ಸಮಾಜ ಮತ್ತು ಮನುಷ್ಯನ ನಡುವಿನ ಸಂಕೀರ್ಣವಾದ ಸಂಬಂಧವನ್ನು ಅದರೆಲ್ಲ ಸಂಕೀರ್ಣತೆಯೊಟ್ಟಿಗೇ ನಮ್ಮ ಮುಂದಿಡುವ ಕೆಲಸವನ್ನು ಅವರು ಮಾಡುತ್ತಾರೆ.

ಯಾವುದನ್ನು ನಾವು ರಕ್ಷಣೆ ಅಥವಾ ಪೋಷಣೆ ಅಂದುಕೊಂಡಿರುತ್ತೇವೆಯೋ, ಅದೇ ಮತ್ತೊಂದು ರೀತಿಯಲ್ಲಿ ಸಂಕೋಲೆಯೂ ಆಗಬಹುದಲ್ಲವೇ? ಎಂಬ ಪ್ರಶ್ನೆಯನ್ನೂ ಈ ಕಿರುಚಿತ್ರ ಕೊನೆಯಲ್ಲಿ ಹುಟ್ಟಿಸುತ್ತದೆ.

ಕನಿಷ್ಠ ಮಾತು, ಕನಿಷ್ಠ ಸಮಯದಲ್ಲಿ ವಿಶ್ವಾತ್ಮವಾದ ವಿಷಯವೊಂದನ್ನು ಹೇಗೆ ಮುಂದಿಡಬಹುದು ಎಂಬುದಕ್ಕೆ ಈ ಕಿರುಚಿತ್ರ ಒಂದು ಉದಾಹರಣೆ. ಹಾಗಾಗಿಯೇ ಅಮೆರಿಕದಲ್ಲಿ ನಡೆಯುವ ಕಥನ ಇದಾದರೂ ನಮ್ಮ ಕಥೆಯಾಗಿಯೂ ಮನಸೊಳಗೆ ಇಳಿಯುವ ಸತ್ವವನ್ನು ಹೊಂದಿದೆ.

ಈ ಕಿರುಚಿತ್ರ ವೀಕ್ಷಣೆಗೆ bit.ly/2OKzWf9 ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.